ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	366
ಸದಸ್ಯರ ಹೆಸರು	ಶ್ರೀ ಕಾಂತ್‌ರಾಜ್ (ಬಿ.ಎಂ.ಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	06.03.2020.
ಉತ್ತರಿಸುವ ಸಚಿವರು	ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ ಎರಡು ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗಡಿ ಅಭಿವೃದ್ಧಿ ಮಂಡಳಿಗೆ ನೀಡಲಾಗಿರುವ ಅನುದಾನ ಎಷ್ಟು; (ಗಡಿವಾರು ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು)	ಕಳೆದ ಎರಡು ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಲಾಗಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ. **ಕ್ರ.ಸಂ. / ವರ್ಷ / ಬಿಡುಗಡೆ ಮಾಡಲಾಗಿರುವ ಮೊತ್ತ (ರೂ.ಲಕ್ಷಗಳಲ್ಲಿ)** 01 / 2017–18 / 5000.00 02 / 2018–19 / 2806.00 ಗಡಿವಾರು ಜಿಲ್ಲೆಗಳ ತಾಲ್ಲೂಕುವಾರು ಅನುದಾನ ಬಿಡುಗಡೆ ಮಾಡಿ ವಿವರವನ್ನು ಅನುಬಂಧ–1 ಮತ್ತು 2 ರಲ್ಲಿ ಇರಿಸಿದೆ.
ಆ)	2018–19ನೇ ಸಾಲಿನ ಆಯ–ವ್ಯಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒದಗಿಸಲಾಗಿರುವ ಅನುದಾನ ಎಷ್ಟು;	2018–19ನೇ ಸಾಲಿನ ಆಯವ್ಯಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯೋಜನೆಗೆ ವಾರ್ಷಿಕ ಹಂಚಿಕೆ 29,729.00 ಲಕ್ಷಗಳು ಹಂಚಿಕೆಯಾಗಿದ್ದು, ಪರಿಷ್ಕೃತ ರೂ.25,750.00 ಲಕ್ಷಗಳು ಹಂಚಿಕೆಯಾಗಿರುತ್ತದೆ.
ಇ)	ಒದಗಿಸಿರುವ ಅನುದಾನದಲ್ಲಿ ಇಲ್ಲಿಯ ತನಕ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; (ವಿವರವಾದ ಮಾಹಿತಿಯನ್ನು ನೀಡುವುದು)	ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒದಗಿಸಿರುವ ಅನುದಾನದಲ್ಲಿ ಹಮ್ಮಿಕೊಳ್ಳಲಾದ ಯೋಜನೆ/ಕಾರ್ಯಕ್ರಮಗಳ ವಿವರವನ್ನು ಅನುಬಂಧ–1 ರಲ್ಲಿ ಇರಿಸಿದೆ. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಒದಗಿಸಿರುವ ಅನುದಾನವನ್ನು 2017–18 ರಿಂದ 2018–19ರವರೆಗೆ ಹಮ್ಮಿಕೊಳ್ಳಲಾದ ಯೋಜನೆ/ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ–1 ಮತ್ತು 2 ರಲ್ಲಿ ಇರಿಸಿದೆ. 2019–20ನೇ ಸಾಲಿನ ವಿವರವನ್ನು ಅನುಬಂಧ–3ರಲ್ಲಿ ಇರಿಸಿದೆ.
ಈ)	2018–19ನೇ ಸಾಲಿನಲ್ಲಿ ಗಡಿ ಅಭಿವೃದ್ಧಿ ಮಂಡಳಿಗೆ ನೀಡಿರುವ ಅನುದಾನವೆಷ್ಟು; ಹಾಗೂ ಈ ಅನುದಾನವನ್ನು ಸಮನಾಗಿ ಗಡಿ ಜಿಲ್ಲೆಗಳ ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾಗಿದೆಯೇ; (ವಿವರ ನೀಡುವುದು)	ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ 2018–19ನೇ ಸಾಲಿನಲ್ಲಿ ರೂ.2806.00ಲಕ್ಷ ಅನುದಾನವನ್ನು ನೀಡಲಾಗಿರುತ್ತದೆ. ಸದರಿ ಅನುದಾನವನ್ನು ಗಡಿ ಜಿಲ್ಲೆಗಳ ಸ್ಥಳೀಯ ಅಗತ್ಯತೆಗಳ ಬೇಡಿಕೆಗಳಿಗನುಗುಣವಾಗಿ ಬಿಡುಗಡೆ ಮಾಡಲಾಗಿರುತ್ತದೆ (ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ).
ಉ)	ಗಡಿ ಅಭಿವೃದ್ಧಿ ಪ್ರದೇಶಗಳಿಗೆ ಅನುದಾನವನ್ನು ನೀಡುವಾಗ ಅನುಸರಿಸುತ್ತಿರುವ ಮಾನದಂಡಗಳೇನು; (ವಿವರ ನೀಡುವುದು)	ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಪ್ರಾಧಿಕಾರ ವ್ಯಾಪ್ತಿಗೊಳಪಡುವ 19 ಗಡಿ ಜಿಲ್ಲೆಗಳ 52 ಗಡಿ ತಾಲ್ಲೂಕುಗ ಹಾಗೂ ಹೊರ ರಾಜ್ಯದ ಗಡಿ ಕನ್ನಡ ಪ್ರದೇಶಗಳಲ್ಲಿ ವಿವಿ

		ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಬಿಡುಗಡೆ, ಮಾಡುವ ಸಲುವಾಗಿ ಪ್ರಾಧಿಕಾರದ ವ್ಯಾಪ್ತಿಗೊಳಪಡುವ 19 ಗಡಿ ಜಿಲ್ಲೆಗಳ 52 ಗಡಿ ತಾಲ್ಲೂಕುಗಳ ಹಾಗೂ ಹೊರ ರಾಜ್ಯಗಳ ಗಡಿ ಕನ್ನಡ ಪ್ರದೇಶಗಳ ವಿವಿಧ ಸಂಘ ಸಂಸ್ಥೆಗಳಿಂದ, ಶಾಲಾ ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆಯನ್ನು ನೀಡಲಾಗುತ್ತದೆ. ಪ್ರಾಧಿಕಾರದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಹಾಗೂ ಜನಪ್ರತಿನಿಧಿಗಳಿಂದ ಸ್ವೀಕೃತವಾದ ಶಿಫಾರಸ್ಸು ಪತ್ರಗಳನ್ನು ಪರಿಶೀಲಿಸಿ ಸ್ವೀಕೃತಗೊಂಡಿರುವ ಅರ್ಜಿಗಳ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಅರ್ಹ ಸಂಘ ಸಂಸ್ಥೆಗಳಿಗೆ ಶಾಲಾ ಕಾಲೇಜುಗಳಿಗೆ ಹಾಗೂ ಗಡಿ ಗ್ರಾಮಗಳಿಗೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಸ್ಥಳೀಯ ಅಗತ್ಯತೆಯ ಬೇಡಿಕೆಗಳನ್ನು ಪರಿಗಣಿಸಿ ಅನುದಾನ ಬಿಡುಗಡೆ ಮಾಡಲಾಗುವುದು.
ಊ)	ಗಡಿ ಅಭಿವೃದ್ಧಿ ಮಂಡಳಿಯ ಅನುದಾನವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ನೀಡಲು ಅವಕಾಶವಿದೆ? (ವಿವರ ನೀಡುವುದು)	ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅನುದಾನವನ್ನು ಈ ಕೆಳಕಂಡ ಯೋಜನೆ/ಕಾರ್ಯಕ್ರಮಗಳಿಗೆ ನೀಡಲು ಅವಕಾಶವಿದೆ. 1. ಸಾಂಸ್ಕೃತಿಕ ಭವನ ನಿರ್ಮಾಣ. 2. ಕನ್ನಡ ಭವನ ನಿರ್ಮಾಣ. 3. ಶಾಲಾ ಕೊಠಡಿ ನಿರ್ಮಾಣ. 4. ಬಯಲುರಂಗ ಮಂದಿರ ನಿರ್ಮಾಣ. 5. ಕ್ರೀಡಾ ಕೊಠಡಿ ನಿರ್ಮಾಣ. 6. ಗ್ರಂಥಾಲಯ ನಿರ್ಮಾಣ. 7. ವಿದ್ಯಾರ್ಥಿ ನಿಲಯ ನಿರ್ಮಾಣ. 8. ಕಂಪ್ಯೂಟರ್ ಕೊಠಡಿ ನಿರ್ಮಾಣ ಮತ್ತು ಕಂಪ್ಯೂಟರ್ ಖರೀದಿ. 9. ಶಾಲಾ ಕಾಂಪೌಂಡ್ ನಿರ್ಮಾಣ. 10. ಆಟದ ಮೈದಾನ ನಿರ್ಮಾಣ. 11. ರಸ್ತೆ ಸುಧಾರಣೆ ಹಾಗೂ ಚರಂಡಿ ನಿರ್ಮಾಣ. 12. ಸಮುದಾಯ ಭವನ ನಿರ್ಮಾಣ. 13. ವಸತಿ ನಿಲಯ ನಿರ್ಮಾಣ. 14. ಚೆಕ್ ಡ್ಯಾಂ ನಿರ್ಮಾಣ ಹಾಗೂ ಕೆರೆ ದುರಸ್ತಿ. 15. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ. 16. ಸೋಲಾರ್ ದೀಪ ಮತ್ತು ಐಮಾಸ್ಟ್ ವಿದ್ಯುತ್ ದೀಪಗಳ ಅಳವಡಿಕೆ. 17. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗಡಿ ಪ್ರದೇಶಗಳಲ್ಲಿ ಏರ್ಪಡಿಸುವುದು.

ಸಂಖ್ಯೆ: ಕಸಂವಾ 39 ಕೆಓಎಲ್ ಆಕ 2020.

(ಸಿ.ಟಿ. ರವಿ)
ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ
ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ
ಸಚಿವರು.

ಅನುಬಂಧ - 1

ಪ್ರಶ್ನೆಸಂಖ್ಯೆ 366

2018-19ನೇ ಸಾಲಿನ ಆಯವ್ಯಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒದಗಿಸಲಾದ ಅನುದಾನ.

ಕ್ರ.ಸಂ	ಆರ್ಥಿಕ ವರ್ಷ	ಯೋಜನೆ/ಯೋಜನೇತರ	ವಾರ್ಷಿಕ ಹಂಚಿಕೆ	ಪರಿಷ್ಕೃತ
1.	2018-19	ಯೋಜನೆ	29729.00	25750.00

4/3/2020

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಅನುಬಂಧ – 2

ಪ್ರಶ್ನೆಸಂಖ್ಯೆ 366

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ವಿವರ.

- ಗಾಂಧೀಜಿ - 150 ಸ್ಮರಣೋತ್ಸವ - ಸಾಂಸ್ಕೃತಿಕ ಕಾರ್ಯಕ್ರಮ
- ಸುಗ್ಗಿ - ಹುಗ್ಗಿ ಕಾರ್ಯಕ್ರಮ.
- ಪ್ರತಿ ಶುಕ್ರವಾರ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ
- ಮನೆಯಂಗಳದಲ್ಲಿ ಮಾತುಕತೆ
- ಸಾಧಕರೊಂದಿಗೆ ಸಂವಾದ
(ಜಿಲ್ಲಾ ಕೇಂದ್ರಗಳಲ್ಲಿ)
- ಕವಿಗೋಷ್ಠಿ
(ಜಿಲ್ಲಾ ಕೇಂದ್ರಗಳಲ್ಲಿ)
- ವಿವಿಧ ಕೇತ್ರಗಳ ರಾಜ್ಯ/ರಾಷ್ಟ್ರ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸುವುದು.
- ಇತರೆ ಇಲಾಖೆ ಹಾಗೂ ಸಂಸ್ಥೆಗಳಲ್ಲಿ ಕನ್ನಡ ಬಾರದವರಿಗೆ ಕನ್ನಡ ಕಲಿಕೆ ತರಗತಿಗಳು
- ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಪ್ರಾಯೋಜಿತ ಕಾರ್ಯಕ್ರಮಗಳಾಗಿ ಪ್ರಸಾರ ಮಾಡುತ್ತಿರುವ "ಪದ ಸಂಸ್ಕೃತಿ" ಮತ್ತು "ಬಾನುಲಿ ಕಲಿಗಳು" ಕಾರ್ಯಕ್ರಮ
- ಜಿಲ್ಲೆಗಳಲ್ಲಿ ಮಹಿಳಾ ಸಂಸ್ಕೃತಿ ಉತ್ಸವ
ಸಾಂಸ್ಕೃತಿಕ ಸೌರಭ - ಹಿರಿಯ ಕಲಾವಿದರಿಗಾಗಿ ಏರ್ಪಡಿಸುವ ಕಾರ್ಯಕ್ರಮ.
- ~~ಯುವ ಸೌರಭ – ಯುವ ಕಲಾವಿದರಿಗಾಗಿ ಏರ್ಪಡಿಸುವ ಕಾರ್ಯಕ್ರಮ.~~
- ಚಿಗುರು - ಮಕ್ಕಳಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮ.
- ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ
- ವಿಶೇಷ ಉತ್ಸವಗಳು
- ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ ಧನಸಹಾಯ ನೀಡುವುದು
- ಅಸಂಘಟಿತ ಕಲಾವಿದರಿಗೆ ವಾದ್ಯಪರಿಕರ-ವೇಷಭೂಷಣ ಖರೀದಿಗೆ ಧನಸಹಾಯ
- ಚಿತ್ರ-ಶಿಲ್ಪಕಲಾ ಕೃತಿಗಳ ಪ್ರದರ್ಶನಕ್ಕೆ ಧನಸಹಾಯ ನೀಡುವುದು
- ವೃತ್ತಿ ನಾಟಕ ಕಂಪನಿಗಳ ಪುನಶ್ಚೇತನಕ್ಕೆ ಧನಸಹಾಯ
- ಕನ್ನಡ ಸಾಹಿತ್ಯ ಪರಿಷತ್‌ನ ಸಿಬ್ಬಂದಿಗಳಿಗೆ ವೇತನಾನುದಾನ ಮತ್ತು ಚಟುವಟಿಕೆಗಳಿಗೆ ಆರ್ಥಿಕ ನೆರವು
- ಜಾನಪದ ಪರಿಷತ್‌ನ ಸಿಬ್ಬಂದಿಗಳಿಗೆ ವೇತನಾನುದಾನ ಮತ್ತು ಚಟುವಟಿಕೆಗಳಿಗೆ ಆರ್ಥಿಕ ನೆರವು
- ಅನುದಾನಿತ ಸಂಸ್ಥೆಗಳಾದ ವಿದ್ಯಾವರ್ಧಕ ಸಂಘ, ನೀನಾಸಂ ಮತ್ತು ದಿ ಆರ್ಟ್ ಇಂಟಿಗ್ರೇಷನ್ ಗಳಿಗೆ ಆರ್ಥಿಕ ನೆರವು.
- ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳು ಮತ್ತು ರಂಗಾಯಣಗಳಿಗೆ ಅನುದಾನ ನೀಡುವುದು.
- ಪ್ರಮುಖ ಸಾಹಿತಿಗಳ ಪುಸ್ತಕಗಳ ಪ್ರಕಟಣೆ ಮಾಡುವುದು.
- ರಾಜ್ಯಾದ್ಯಂತ ನಡೆಯುವ ಸಂಘ-ಸಂಸ್ಥೆಗಳು ನಡೆಸುವ ಸಮಾರಂಭಗಳಿಗೆ ಕಾರ್ಯಕ್ರಮಗಳ ಪ್ರಾಯೋಜನೆ ಮಾಡುವುದು.
- ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ ದಿನದಂದು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸುವುದು.

2......

- ಸಾಹಿತಿ ಕಲಾವಿದರ ಹೆಸರಿನಲ್ಲಿ ಸರ್ಕಾರದಿಂದ ಸ್ಥಾಪಿಸಿರುವ ಟ್ರಸ್ಟ್‌ಗಳ ಚಟುವಟಿಕೆಗಳಿಗೆ ಅನುದಾನ ಒದಗಿಸುವುದು.
- ಸರ್ಕಾರವು ಘೋಷಿಸಿರುವ ಹೊಸ ಯೋಜನೆಗಳ ಅನುಷ್ಠಾನ.
- ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಾಹಿತಿ / ಕಲಾವಿದರುಗಳಿಗೆ ಮಾಸಾಶನ ನೀಡುವುದು.
- ಕಲಾವಿದರ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವುದು.
- ಜಾನಪದ ಜಾತ್ರೆ ಕಾರ್ಯಕ್ರಮ.
- ಜನಪರ ಉತ್ಸವ, ಗಿರಿಜನ ಉತ್ಸವ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ ಪ್ರಾಯೋಜನೆ

ಜಯಂತಿಗಳ ಪಟ್ಟಿ

53.	ದೇವರದಾಸಿಮಯ್ಯ ಜಯಂತಿ
54.	ಭಗವಾನ್ ಮಹಾವೀರ ಜಯಂತಿ
55.	ಅಕ್ಕಮಹಾದೇವಿ ಜಯಂತಿ
56.	ಬಸವ ಜಯಂತಿ
57.	ಶಂಕರಾಚಾರ್ಯ ಜಯಂತಿ (ತತ್ವಜ್ಞಾನಿಗಳ ದಿನಾಚರಣೆ
58.	ಭಗೀರಥ ಜಯಂತಿ
59.	ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ (ಮೈಸೂರು, ಮಂಡ್ಯ ಜಿಲ್ಲೆ ಮತ್ತು ಕೇಂದ್ರ ಕಛೇರಿಯಲ್ಲಿ)
60.	ಕೃಷ್ಣ ಜಯಂತಿ
61.	ಬ್ರಹ್ಮಶ್ರೀ ನಾರಾಯಣಗುರು ಜಯಂತಿ
62.	ವಿಶ್ವಕರ್ಮ ಜಯಂತಿ
63.	ಟಿಪ್ಪುಸುಲ್ತಾನ್ ಜಯಂತಿ
64.	ಕನಕ ಜಯಂತಿ
65.	ವಿಶ್ವ ಮಾನವ ದಿನಾಚರಣೆ
66.	ಸಿದ್ಧರಾಮ ಜಯಂತಿ
67.	ಅಂಬಿಗರ ಚೌಡಯ್ಯ ಜಯಂತಿ
68.	ಛತ್ರಪತಿ ಶಿವಾಜಿ ಜಯಂತಿ
69.	ಮಡಿವಾಳ ಮಾಚಿದೇವ ಜಯಂತಿ
70.	ಸಂತಕವಿ ಸರ್ವಜ್ಞ ಜಯಂತಿ
71.	ಕಾಯಕ ಶರಣರ ಜಯಂತಿ
72.	ಹೇಮರೆಡ್ಡಿ ಮಲ್ಲಮ್ಮ ಜಯಂತಿ
73.	ಕೆಂಪೇಗೌಡ ಜಯಂತಿ
74.	ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ
75.	ವೇಮನ ಜಯಂತಿ
76.	ಸಂತ ಸೇವಾಲಾಲ್ ಜಯಂತಿ
77.	ಹಡಪದ ಅಪ್ಪಣ್ಣ ಜಯಂತಿ
78.	ಸವಿತಾ ಮಹರ್ಷಿ ಜಯಂತಿ

ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಆಯೋಜಿಸಲಾಗುವ ಉತ್ಸವಗಳ ವಿವರ

ಕ್ರ.ಸಂ	ಉತ್ಸವಗಳ ವಿವರ	ಜಿಲ್ಲೆಗಳ ಹೆಸರು
39.	ಚಾಲುಕ್ಯ ಉತ್ಸವ	ಬಾಗಲಕೋಟೆ
40.	ಧಾರವಾಡ ಉತ್ಸವ	ಧಾರವಾಡ
41.	ಬೆಳವಡಿ ಮಲ್ಲಮ್ಮ ಉತ್ಸವ	ಬೆಳಗಾವಿ
42.	ವೀರರಾಣಿ ಅಬ್ಬಕ್ಕ ಉತ್ಸವ; ಉಲ್ಲಾಳ ಉತ್ಸವ	ಮಂಗಳೂರು
43.	ಕರಾವಳಿ ಉತ್ಸವ	ಉತ್ತರ ಕನ್ನಡ
44.	ಕರಾವಳಿ ಉತ್ಸವ	ದಕ್ಷಿಣ ಕನ್ನಡ
45.	ಗಗನಚುಕ್ಕಿ ಜಲಪಾತೋತ್ಸವ ಶಿಂಷಾ	ಮಂಡ್ಯ
46.	ರನ್ನ ವೈಭವ.	ಬಾಗಲಕೋಟೆ
47.	ಹೊಯ್ಸಳ ಉತ್ಸವ.	ಹಾಸನ
48.	ಲಕ್ಕುಂಡಿ ಉತ್ಸವ	ಗದಗ
49.	ಬಸವ ಉತ್ಸವ ಬಸವಕಲ್ಯಾಣ	ಬೀದರ
50.	ನವರಸಪುರ ಉತ್ಸವ	ವಿಜಯಪುರ
51.	ಆನೆಗೊಂದಿ ಉತ್ಸವ	ಕೊಪ್ಪಳ
52.	ಭರಚುಕ್ಕಿ ಜಲಪಾತೋತ್ಸವ	ಚಾಮರಾಜನಗರ
53.	ರಾಷ್ಟ್ರಕೂಟ ಉತ್ಸವ	ಕಲಬುರ್ಗಿ
54.	ಸಂಗೊಳ್ಳಿರಾಯಣ್ಣ ಉತ್ಸವ	ಬೆಳಗಾವಿ
55.	ಕಿತ್ತೂರು ಉತ್ಸವ	ಬೆಳಗಾವಿ
56.	ಹಂಪಿ ಉತ್ಸವ	ಬಳ್ಳಾರಿ
57.	ಕದಂಬೋತ್ಸವ	ಉತ್ತರ ಕನ್ನಡ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು